



# ಕಣ್ಣ ತೇವ

ಕಣ್ಣ ತೇವಕ್ಕೆಲ್ಲಾ ಅರ್ಥ ಹುಡುಕಬಾರದು

ಒಮ್ಮೊಮ್ಮೆ ಅದು ಹೆತ್ತೊಡಲ ಉರಿ
ಒಮ್ಮೆ ಸುಮ್ಮನೆ ಹಾದು ಹೋಗುವ
ಒಂದು ನೆನಪು, ಹಳೆಯ ಬಂಧ
ಮುಗಿಲು ಬಿರಿವ ಮಳೆ ಸುರಿದ
ನಂತರ ಉಳಿದು ಬಿಡುವ ನಿಶ್ಯಬ್ದ

ಚಳಿಗಾಲದ ದೀರ್ಘ ರಾತ್ರಿಯಲಿ ಹೊದ್ದ
ಬೆಚ್ಚನೆಯ ಕೌದಿಯೊಳಗೆ
ಸೇರಿಕೊಂಡ ಚೇಳು
ಒಂದು ಮಗ್ಗಲು ಬದಲಿಸುವಷ್ಟರಲ್ಲಿ
ಚುಚ್ಚಿದ ಇಷ್ಟುದ್ದದ ಮುಳ್ಳು

ಬಸಿದ ಬೆವರ ಲೆಕ್ಕ
ಅಪರಾತ್ರಿಯ ಸುಖದ ನರಳಿಕೆಯ
ಮಧ್ಯದಲ್ಲೆಲ್ಲೋ ಕೇಳಿ ಬಂದ
ಒಂದು ವಿಷಾದದ ನಿಟ್ಟುಸಿರು
ಮುರಿದ ಗೋಡೆಯೊಳಗಿನ ಸಣ್ಣ ಬಿಕ್ಕಳಿಕೆ

ಈಗಷ್ಟೇ ಆರಿದ ದೀಪ
ಒಡೆದು ಬಿದ್ದ ಕೊಳಲು
ತಂತಿ ಹರಿದ ವೀಣೆ
ಒಂದು ಹನಿ ಪ್ರೇಮ

ಅಥವಾ ಕಣ್ಣ ತೇವಕ್ಕೆಲ್ಲಾ
ಅರ್ಥ ಇರಲೇಬೇಕಿಲ್ಲವೇನೋ?

● ಫಾತಿಮಾ ರಲಿಯಾ